ಸಾಕ್ಷಿಯನ್ನು ದಿಃ13.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

1. ನಾನು ಸಣ್ಣಕಾಳೇಗೌಡರ ಮಗ.

2. ವಾದಿ ಕೃಷ್ಣೇಗೌಡರು ನನಗೆ ಸಂಬಂಧಿಕರಲ್ಲ.

3. ವಾದಿಯು ಈ ದಾವೆಯನ್ನು ಸ.ನಂ.49/2 ಎ, 45/8 ರಲ್ಲಿ 24 ಗುಂಟೆ, 45/12 ಕ್ಕೆ ಹಾಕಿದ್ದಾರೆ.

4. ಸ.ನಂ.45/8 ಕ್ಕೆ ಏನು ಚೆಕ್ಕುಬಂದಿ ನೀಡಿದ್ದಾರೆ ಎಂದರೆ, ಪೂರ್ವಕ್ಕೆಃ ಸಣ್ಣಕಾಳೇಗೌಡ ಬಾಬ್ತು ಜಮೀನು, ಪಶ್ಚಿಮಕ್ಕೆಃ ಹುಚ್ಚೇಗೌಡರ ಜವರಪ್ಪ ಮತ್ತು ಮಕ್ಕಳು, ಉತ್ತರಕ್ಕೆಃ ಹಸುವಿನಕಾವಲು ಗಡಿ ಹಾಗೂ ದಕ್ಷಿಣಕ್ಕೆಃ ಸ.ನಂ.45/12 ರ ಜಮೀನು. ಸದರಿ ಸ.ನಂ.45/12 ನಮಗೆ ಸೇರಿದ್ದು. ಸದರಿ ಚಕ್ಕುಬಂದಿ ಜಮೀನಿನಲ್ಲಿ ನಿಮಗೆ ಹಕ್ಕು ಸ್ವಾಧೀನ ಇದೆಯಾ ಎಂದರೆ ಇದೆ.

5. ಪೂರ್ವಕ್ಕೆಃ ಸಿ.ಎಂ.ಸಣ್ಣಕಾಳೇಗೌಡ ಬಾಬ್ತು ಜಮೀನು, ಪಶ್ಚಿಮಕ್ಕೆಃ ನಾಗಮ್ಮನ ಜಮೀನು, ಉತ್ತರಕ್ಕೆಃ ಕೃಷ್ಣೇಗೌಡರ ಜಮೀನು ಹಾಗೂ ದಕ್ಷಿಣಕ್ಕೆಃ ಗೆಂಡೆ ಕಾಳೇಗೌಡ ಈಗ ಅವರ ಮಗ ಹನುಮೇಗೌಡರ ಜಮೀನು. ಸದರಿ ಜಮೀನಿನ ಮೇಲೆ ನಿಮಗೆ ಹಕ್ಕು ಸ್ವಾಧೀನ ಇದೆಯಾ ಎಂದರೆ ಇದೆ.

6. ಸ.ನಂ.45/12 ರಲ್ಲಿ 18 ಗುಂಟೆ ಇದೆ. ಅದಕ್ಕೆ ಏನು ಚೆಕ್ಕುಬಂದಿ ನೀಡಿದ್ದಾರೆ ಎಂದರೆ, ಪೂರ್ವಕ್ಕೆಃ ನನ್ನ ಜಮೀನು ಎಂದರೆ ಸರಿ. ಪಶ್ಚಿಮಕ್ಕೆಃ ನಾಗಮ್ಮನ ಜಮೀನು ಎಂದರೆ ಸರ. ಉತ್ತರಕ್ಕೆಃ ರಾಮಚಂದ್ರ ಭೋವಿ ರವರ ಜಮೀನು ಎಂದರೆ ಸರಿ. ಹಾಗೂ ದಕ್ಷಿಣಕ್ಕೆಃ ಕೃಷ್ಣೇಗೌಡರ ಜಮೀನು ಎಂದರೆ, ಇಲ್ಲ ನಮ್ಮ ಜಮೀನು. ಸದರಿ ಚಕ್ಕುಬಂದಿ ಜಮೀನಿನಲ್ಲಿ ನಿಮಗೆ ಹಕ್ಕು ಸ್ವಾಧೀನ ಇದೆಯಾ ಎಂದರೆ ಇದೆ.

7. ಸ.ನಂ.49/2 ಎ ರಲ್ಲಿ 1 ಎಕರೆ 16 ಗುಂಟೆ ಇದೆ. ಅದಕ್ಕೆ ಏನು ಚೆಕ್ಕುಬಂದಿ ನೀಡಿದ್ದಾರೆ ಎಂದರೆ, ಪೂರ್ವಕ್ಕೆಃ ಪೃಥ್ವಿರಾಜ. ಪಶ್ಚಿಮಕ್ಕೆಃ ನಮ್ಮ ಸ.ನಂ.45/12. ಉತ್ತರಕ್ಕೆಃ ಹಸುವಿನ ಕಾವಲು ಗಡಿ, ಹಾಗೂ ದಕ್ಷಿಣಕ್ಕೆಃ ಮರಿಗೌಡರ ಕಾಳೇಗೌಡರ ಜಮೀನು.

8. ಪೂರ್ವಕ್ಕೆಃ ರಸ್ತೆ. ಪಶ್ಚಿಮಕ್ಕೆಃ ಹನುಮೇಗೌಡರ ಜಮೀನು. ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ನಿಮ್ಮ ಜಮೀನು. ಸದರಿ ಚಕ್ಕುಬಂದಿ ಜಮೀನಿನಲ್ಲಿ ನಿಮಗೆ ಹಕ್ಕು ಸ್ವಾಧೀನ ಇದೆಯಾ ಎಂದರೆ ಇದೆ.

9. ದಾವಾ ಸ್ವತ್ತು 1 ರಿಂದ 3 ರ ಆಸ್ತಿಗಳು ನಮಗೆ ಸೇರಿದ್ದು ಎಂದು ತೋರಿಸಲು ನನ್ನ ಬಳಿ ಕ್ರಯಪತ್ರ ಇದೆ. ಸದರಿ ಕ್ರಯಪತ್ರದಲ್ಲಿ ಸ.ನಂ.45/8, 45/12 ನಮೂದು ಇದೆಯಾ ಎಂದರೆ, ಇಲ್ಲ, ತಿದ್ದುಪಡಿಗಾಗಿ ಮಾನ್ಯ ಹೆಚ್ಚುವರಿ ನ್ಯಾಯಾಲಯದಲ್ಲಿ ಅ.ದಾ.ನಂ.28/2017 ರಂತೆ ದಾವೆ ಹಾಕಿದ್ದೇವೆ.

10. ನಾವು ನಂಜೇಗೌಡರಿಂದ ಕ್ರಯಕ್ಕೆ ಪಡೆದಿದ್ದೆವು. ಸ.ನಂ.49/2 ಎ ರಲ್ಲಿ 1 ಎಕರೆ 16 ಗುಂಟೆ, ಒಟ್ಟು 3 ಎಕರೆ 22 ಗುಂಟೆ ಖರೀದಿ ಮಾಡಿದ್ದೇವೆ.

11. ಸ.ನಂ.49 ರಲ್ಲಿ 4 ಪೋಡು ಆಗಿದೆ. 1/ಎ ರಲ್ಲಿ ಪೃಥಿವರಾಜ, 1/ಬಿ ರಲ್ಲಿ ಪ್ರಥ್ವಿರಾಜ 16 ಗುಂಟೆ ಹಾಗೂ ಕಾವೇರಿ ನೀರಾವರಿ ನಿಗಮಕ್ಕೆ 16 ಗುಂಟೆ ಇದೆ.

12. ಸ.ನಂ.49/2 ಎ ರಲ್ಲಿ ನಂಜೇಗೌಡರಿಂದ ಕೃಷ್ಣೇಗೌಡ ರವರಿಗೆ 1 ಎಕರೆ 1 ಗುಂಟೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

13. ಸ.ನಂ.49/2 ಎ ನನ್ನ ಹೆಸರಿನಲ್ಲಿ ಇರುವ ಬಗ್ಗೆ ರವಿನ್ಯೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಹಳೆ ಪಹಣಿ ಹಾಜರುಪಡಿಸಿದ್ದೇನೆ.

14. ಸ.ನಂ.45/8 ರಲ್ಲಿ 24 ಗುಂಟೆ ಕೃಷ್ಣೇಗೌಡ ಬಿನ್ ನಂಜೇಗೌಡರ ಹೆಸರಿನಲ್ಲಿ ಪಹಣಿ ಇದೆ ಎಂದರೆ, ಈಗ ಸುಂದರಮ್ಮ ನವರ ಹೆಸರಿನಲ್ಲಿ ಇದೆ. ಸದರಿ ಸುಂದ್ರಮ್ಮನವರು ವಾದಿಯ ಪತ್ನಿ ಎಂದರೆ ಸರಿ.

15. ಸುಂದ್ರಮ್ಮನವರಿಗೆ ಕೃಷ್ಣೇಗೌಡರು ಹಕ್ಕು ಸ್ವಾಧೀನ ಇರುವುದರಿಂದ, ದಿಃ 11.03.2025 ರಂದು ದಾವಾ ಸ್ವತ್ತುಗಳನ್ನು ಅವರ ಹೆಸರಿಗೆ ವ್ಯವಸ್ಥಾಪತ್ರ ಮಾಡಿದ್ದಾರೆ ಎಂದರೆ, ದಾವಾ ಇತ್ಯರ್ಥಕ್ಕೆ ಇದ್ದಾಗ ಮಾಡಿದ್ದಾರೆ ಎಂದು ನುಡಿಯುತ್ತಾರೆ.

16. ನಮ್ಮ ಕ್ರಯಪತ್ರದಲ್ಲಿ ಸ.ನಂ.45/11 ಎಂದು ನಮೂದಾಗಿದೆ. 11 ನೇ ಪೋಡಿನಲ್ಲಿ ಎಷ್ಟು ಇದೆ ಎಂದರೆ, ಪಹಣಿಯಲ್ಲಿ 1 ಎಕರೆ 4 ಗುಂಟೆ ಇದೆ ಹಾಗೂ ಎಂ.ಆರ್ ನಲ್ಲಿ 32 ಗುಂಟೆ ಇದೆ. ನನ್ನ ತಂದೆ ನಂಜೇಗೌಡರ ಬಳಿ 1974 ರಲ್ಲಿ ಸದರಿ ಕ್ರಯಪತ್ರ ಬರೆಸಿಕೊಂಡಿದ್ದಾರೆ.

17. ಕ್ರಯಪತ್ರ ಬರೆಸಿಕೊಂಡ ನಂತರ ಸ.ನಂ.45/11 ರಲ್ಲಿ ನಿಮ್ಮ ತಂದೆ ಸ್ವಾಧೀನದಲ್ಲಿದ್ದಾರೆ ಎಂದರೆ, ಇಲ್ಲ ಸ.ನಂ.45/8 ರಲ್ಲಿ ಇದ್ದಾರೆ.

18. ಸ.ನಂ.45/11 ಈಗ ಬೋಗಿಗೌಡ ರವರ ಹೆಸರಿನಲ್ಲಿ ಇದೆ.

19. ಬೋಗಿಗೌಡರ ಮೇಲೆ ಸ.ನಂ.45/11 ನಿಮಗೆ ಸೇರಬೇಕು ಎಂದು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ದಾವೆ ಹಾಕಿದ್ದೀರಾ ಎಂದರೆ, 1978 ರ ಕ್ರಯಪತ್ರದ ಮೇಲೆ 16 ಗುಂಟೆ ಸೇರಬೇಕು ಎಂದು ಹಾಕಿದ್ದೇವೆ.

20. ಕ್ರಯಪತ್ರ ಬರೆಸುವಾಗ ನಿಮ್ಮ ತಂದೆ 1974 ರಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ಕ್ರಯಪತ್ರ ಬರೆಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

21. 1974 ರಲ್ಲಿ ನಿಮ್ಮ ತಂದೆಗೆ ಕ್ರಯಪತ್ರ ಬರೆಸುವಾಗ 45/11 ರ ಪಹಣಿ ನೋಡಿ ಬರೆಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಪಹಣಿ ನೋಡಿದ್ದಾರಾ ಇಲ್ಲವಾ ಎಂದರೆ, ಜಾಸ್ತಿ ಜಮೀನಾದ್ದರಿಂದ ಗಮನಿಸಿಲ್ಲ.

22. ಬ್ಯಾಂಕಿನಲ್ಲಿ ಅಥವಾ ಸೊಸೈಟಿಯಲ್ಲಿ ನೀವು ಸಾಲ ಪಡೆಯುತ್ತೀರಾ ಎಂದರೆ, ಇಲ್ಲ.

23. 1974 ರ ಕ್ರಯಪತ್ರದಲ್ಲಿ ಸ.ನಂ.45/11 ಎಂದು ನಮೂದು ಮಾಡಿದ್ದಾರೆ. ಸದರಿ ಕ್ರಯಪತ್ರದಲ್ಲಿ ಯಾವ ಚಕ್ಕುಬಂದಿ ನೀಡಿದ್ದಾರೆ ಎಂದು ಗೊತ್ತು. ಪೂರ್ವಕ್ಕೆ ನಮ್ಮ ಬಾಬ್ತು, ಪಶ್ಚಿಮಕ್ಕೆ ಹುಚ್ಚೇಗೌಡರ ಜವರಪ್ಪನವರ ಹೊಲ, ಉತ್ತರಕ್ಕೆ ಹಸುವಿನಕಾವಲು ಗಡಿ ಹಾಗೂ ದಕ್ಷಿಣಕ್ಕೆ ಗೆಂಡೆ ಕಾಳಯ್ಯ.

24. ಸದರಿ ಚಕ್ಕುಬಂದಿಗೆ ಹಾಗೂ ದಾವಾ ಚಕ್ಕುಬಂದಿಗೆ ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಅಳತೆ ಕಾರ್ಯ ಮಾಡಿಸಿದ್ದೀರಾ ಎಂದರೆ, ಇಲ್ಲ ನಕಾಶೆ ನೀಡಿದ್ದೇವೆ.

25. ಅಳತೆ ಮಾಡಿಸದೇ ಯಾವ ಸರ್ವೇ ನಂಬರ್ ಎಲ್ಲಿ ಬರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ, ಹೇಳಬಹುದು.

26. ನಿಮ್ಮ ತಕರಾರಿನಲ್ಲಿ ನೀವು ಅಳತೆ ಮಾಡಿಸಿದ್ದೇವೆ ಎಂದು ಬರೆಸಿದ್ದೀರಾ ಎಂದರೆ ಇಲ್ಲ.

27. ನೀವು ಹುಣಸೂರು ಎ.ಸಿ ನ್ಯಾಯಾಲಯದಲ್ಲಿ ಸ.ನಂ.49/2 ಎ, 49/1 ಬಿ, 49/1 ಎ ಗೆ ಸಂಬಂಧಪ್ಪಟಂತೆ ವಾದಿಗಳ ವಿರುದ್ಧ ಒಂದು ಅಪೀಲು ದಾಖಲು ಮಾಡಿದ್ದೀರಾ ಎಂದರೆ ಸರಿ.

28. ಸದರಿ ಅಪೀಲಿನಲ್ಲಿ ಕ್ರಯಪತ್ರದಲ್ಲಿ ಬೇರೆ ಸರ್ವೇ ನಂಬರ್ ಬರೆದುಕೊಟ್ಟಿದ್ದಾರೆ ಎಂದು ಸ.ನಂ.49/11 ಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಮಾಡಿದ್ದೀರಾ ಎಂದರೆ, ಇಲ್ಲ.

29. ಸ.ನಂ.49/2 ಎ, 49/1 ಬಿ, 49/1 ಎ ಗೆ ಸಂಬಂಧಪ್ಪಟಂತೆ ಎ.ಸಿ ನ್ಯಾಯಾಲಯದಲ್ಲಿ ನಿಮ್ಮ ಅಪೀಲು ವಜಾ ಆಗಿದೆ ಎಂದರೆ ಸರಿ.

30. ನನ್ನ ತಂದೆ 2017 ರಲ್ಲಿ ಮೃತರಾಗಿದ್ದಾರೆ. ನಿಮ್ಮ ತಂದೆಗೆ ತಪ್ಪಾಗಿ ಕ್ರಯಪತ್ರ ಬರೆಸಿದ ಬಗ್ಗೆ ಯಾವಾಗ ಗೊತ್ತಾಗಿದೆ ಎಂದರೆ, ಮಾನ್ಯ ಹೆಚ್ಚುವರಿ ನ್ಯಾಯಾಲಯದಲ್ಲಿ ಕೇಸ್ ಹಾಕಿದಾಗ 2017 ರಲ್ಲಿ ಅವರು ಸಾಯುವ ಮುಂಚೆ ಗೊತ್ತಾಗಿದೆ.

31. ಸ.ನಂ.49/2 ಎ, 45/8/ 45/12 ಯಾವ ಆಧಾರದ ಮೇಲೆ ತಪಾಪ್ಪಾಗಿದೆ ಎಂದು ಬಂದಿದ್ದೀರಾ ಎಂದರೆ, ಚಕ್ಕುಬಂದಿ ಮೇಲೆ ಗೊತ್ತಾಗಿದೆ.

32. ನಂಜೇಗೌಡರು ದಿಃ 03.03.2019 ರಲ್ಲಿ ಮೃತರಾಗಿದ್ದಾರೆ. ನಂಜೇಗೌಡರು ಬದುಕಿದ್ದ ಕಾಲದಲ್ಲಿ ನಿಮ್ಮ ತಂದೆ ಕ್ರಯಪತ್ರ ತಿದ್ದುಪಡಿ ಮಾಡಲು ತೊಂದರೆ ಇತ್ತಾ ಎಂದರೆ, ಹೌದು ಖಾತೆ ನಂಜೇಗೌಡರ ಹೆಸರಿನಲ್ಲಿ ಇರಲಿಲ್ಲ.

33. ನಂಜೇಗೌಡರಿಂದ ಖಾತೆ 2003 ರಲ್ಲಿ ಕೃಷ್ಣೇಗೌಡರ ಮಗನಿಗೆ ಬದಲಾವಣೆ ಆಗಿತ್ತು. ಸದರಿ ವಿಚಾರ ನಮಗೆ ಆಗ ಗೊತ್ತಿರಲಿಲ್ಲ.

34. ಜಮೀನುಗಳ ಪಹಣಿ ಹಾಗೂ ಎಂ.ಆರ್ ನೋಡುವ ಅಭ್ಯಾಸ ಇಟ್ಟುಕೊಂದ್ದೀರಾ ಎಂದರೆ, ಆಗ ಇರಲಿಲ್ಲ, ಈಗ ನೋಡುತ್ತೇನೆ. ನನ್ನ ತಂದೆ ಸಹ ನೋಡುವ ಅಭ್ಯಾಸ ಇಟ್ಟುಕೊಂಡಿರಲಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ